# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **671** |
| ಸದಸ್ಯರ ಹೆಸರು | : | ಡಾ|| ಯತೀಂದ್ರ ಎಸ್. (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12-12-2025 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬೆಳೆ ವಿಮೆ ಕಾರ್ಯವನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸದ ಕಾರಣದಿಂದ ರೈತರು ಬೆಳೆದ ಬೆಳೆಗಳು ಹಾನಿಗೊಳಗಾದ ಪ್ರಕರಣಗಳಲ್ಲಿ ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮಗಳನ್ನು ತೆಗೆದುಕೊಂಡಿದೆ? (ವಿವರ ಒದಗಿಸುವುದು) | ರಾಜ್ಯದ 31 ಜಿಲ್ಲೆಗಳಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 2016-17ನೇ ಸಾಲಿನಿಂದ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಸದರಿ ಯೋಜನೆಯು ಇಳುವರಿ ಹಾಗೂ ಕ್ಷೇತ್ರ ಆಧಾರಿತ ಯೋಜನೆಯಾಗಿದ್ದು, ಹೋಬಳಿ/ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬೆಳೆಗಳನ್ನು ಅಧಿಸೂಚಿಸಲಾಗುತ್ತದೆ.<br><br>ಮುಂಗಾರು ಹಂಗಾಮಿಗೆ ಒಟ್ಟು 36 ಬೆಳೆಗಳು, ಹಿಂಗಾರು ಹಂಗಾಮಿಗೆ ಒಟ್ಟು 22 ಬೆಳೆಗಳು ಹಾಗೂ ಬೇಸಿಗೆ ಹಂಗಾಮಿಗೆ ಒಟ್ಟು 6 ಬೆಳೆಗಳನ್ನು ಹೋಬಳಿ/ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಧಿಸೂಚಿಸಲಾಗುತ್ತಿದೆ.<br><br>ಪ್ರತಿ ವರ್ಷವು ಬೆಳೆ ವಿಮೆ ಯೋಜನೆಯಡಿ ಸರಾಸರಿ 24 ಲಕ್ಷ ರೈತರು ನೋಂದಣಿ ಮಾಡಿಕೊಳ್ಳುತ್ತಿದ್ದು, ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿ ಮಾಹಿತಿಯು (Actual Yield) ನಿಗದಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ (Threshold Yield) ಕಡಿಮೆ ಇದ್ದರೆ, ಇಳುವರಿಯ ಶೇಕಡವಾರು ಕೊರತೆಗೆ ಅನುಗುಣವಾಗಿ ನೋಂದಣಿ ಮಾಡಿಕೊಂಡಂತಹ ರೈತರ ಪೈಕಿ ಅರ್ಹ ರೈತರಿಗೆ ಮಾತ್ರ ಬೆಳೆ ವಿಮಾ ಪರಿಹಾರ ಮೊತ್ತವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ವಿಮಾ ಸಂಸ್ಥೆಗಳಿಂದ ಪಾವತಿಸಲಾಗುತ್ತಿದೆ.<br><br>ರಾಜ್ಯದ ಇಚ್ಛೆಯುಳ್ಳ ಎಲ್ಲಾ ರೈತರು ಅಧಿಸೂಚಿತ ಬೆಳೆ ಬೆಳೆದಿದ್ದಲ್ಲಿ ತಮ್ಮ ಪಾಲಿನ ಪ್ರೀಮಿಯಂ |

| | | |
|---|---|---|
| | | ಮೊತ್ತವನ್ನು ಪಾವತಿಸಿ ಸದರಿ ಯೋಜನೆಯಡಿ ನೋಂದಾಯಿಸಿಕೊಳ್ಳಬಹುದಾಗಿದೆ.<br><br>2016-17 ರಿಂದ 2024-25ನೇ ಸಾಲಿನವರೆಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ನೋಂದಾಯಿತ ರೈತರ ಅರ್ಜಿಗಳ ಪೈಕಿ 102.90 ಲಕ್ಷ ಫಲಾನುಭವಿಗಳಿಗೆ ರೂ.13063.35 ಕೋಟಿಗಳ ವಿಮಾ ಪರಿಹಾರವನ್ನು ಮಾರ್ಗಸೂಚಿಯನ್ವಯ ಬೆಳೆ ನಷ್ಟವನ್ನು ಅನುಭವಿಸಿರುವ ರೈತರಿಗೆ ಪಾವತಿಸಲಾಗಿದ್ದು, ವರ್ಷವಾರು ಯೋಜನೆಯಡಿ ನೋಂದಾಯಿಸಿಕೊಂಡ ರೈತರ ಸಂಖ್ಯೆ ಹಾಗೂ PMFBY ಮಾರ್ಗಸೂಚಿಯನ್ವಯ ಪಾವತಿಸಲಾಗಿರುವ ವಿಮಾ ಪರಿಹಾರ ಮೊತ್ತದ ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ. |

*ಕೃ ಇ 219 ಎಎಂಎಸ್ 2025*

**(ಎನ್.ಚಲುವರಾಯಸ್ವಾಮಿ)**
ಕೃಷಿ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ಯತೀಂದ್ರ.ಎಸ್ (ವಿಧಾನಸಭಾ ಕ್ಷೇತ್ರ) ಇವರು ಮಂಡಿಸಿರುವ ಚುಕ್ಕೆ ರಹಿತ ಪ್ರ.ಸಂ: 671ಕ್ಕೆ ಸಂಬಂಧಿಸಿದ**

**ಅನುಬಂಧ**

**2016-17 ರಿಂದ 2024-25 ರವರೆಗೆ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ವರ್ಷವಾರು ನೋಂದಾಯಿಸಿದ ರೈತರ ಸಂಖ್ಯೆ ಮತ್ತು ಅರ್ಹ ಫಲಾನುಭವಿ ರೈತರಿಗೆ ಜಮೆಯಾದ ವಿಮಾ ಪರಿಹಾರ ಮೊತ್ತ**

| ವರ್ಷ/ಹಂಗಾಮು | ನೋಂದಾಯಿಸಿದ ರೈತರ ಸಂಖ್ಯೆ | ವಿಸ್ತೀರ್ಣ (ಹೆ) | ಫಲಾನುಭವಿಗಳ ಸಂಖ್ಯೆ | ವಿಮಾ ಪರಿಹಾರ (ಮೊತ್ತ ರೂ. ಲಕ್ಷಗಳಲ್ಲಿ) |
|---|---|---|---|---|
| 2016 ಮುಂಗಾರು | 1398164 | 1144969.56 | 682467 | 100224.39 |
| 2016-17 ಹಿಂಗಾರು & ಬೇಸಿಗೆ | 1179697 | 1701619.00 | 1187996 | 85084.32 |
| **ಒಟ್ಟು 2016-17** | **2577861** | **2846588.56** | **1870463** | **185308.71** |
| 2017 ಮುಂಗಾರು | 2028902 | 1873067.00 | 556061 | 60999.50 |
| 2017-18 ಹಿಂಗಾರು & ಬೇಸಿಗೆ | 27979 | 36063.00 | 8965 | 1034.81 |
| **ಒಟ್ಟು 2017-18** | **2056881** | **1909130.00** | **565026** | **62034.31** |
| 2018 ಮುಂಗಾರು | 1528986 | 1452383.00 | 857887 | 164863.22 |
| 2018-19 ಹಿಂಗಾರು & ಬೇಸಿಗೆ | 565009 | 728015.73 | 453426 | 100228.11 |
| **ಒಟ್ಟು 2018-19** | **2093995** | **2180398.73** | **1311313** | **265091.33** |
| 2019 ಮುಂಗಾರು | 1419754 | 1214494.34 | 683854 | 69299.81 |
| 2019-20 ಹಿಂಗಾರು & ಬೇಸಿಗೆ | 681486 | 828792.03 | 180251 | 19697.68 |
| **ಒಟ್ಟು 2019-20** | **2101240** | **2043286.37** | **864105** | **88997.49** |
| 2020 ಮುಂಗಾರು | 1344771 | 1261303.34 | 445403 | 54757.22 |
| 2020-21 ಹಿಂಗಾರು & ಬೇಸಿಗೆ | 171243 | 221013.43 | 69769 | 8989.61 |
| **ಒಟ್ಟು 2020-21** | **1516014** | **1482316.77** | **515172** | **63746.83** |
| 2021 ಮುಂಗಾರು | 1267914 | 1178311.56 | 774364 | 78610.52 |
| 2021-22 ಹಿಂಗಾರು & ಬೇಸಿಗೆ | 309189 | 394526.92 | 90258 | 9047.49 |
| **ಒಟ್ಟು 2021-22** | **1577103** | **1572838.477** | **864622** | **87658.01** |
| 2022 ಮುಂಗಾರು | 1961898 | 1706692.69 | 1157872 | 119082.90 |
| 2022-23 ಹಿಂಗಾರು & ಬೇಸಿಗೆ | 317715 | 380071.15 | 91167 | 17323.20 |
| **ಒಟ್ಟು 2022-23** | **2279613** | **2086763.85** | **1249039** | **136406.10** |
| 2023 ಮುಂಗಾರು | 1914839 | 1509855.77 | 1729832 | 187168.09 |
| 2023-24 ಹಿಂಗಾರು & ಬೇಸಿಗೆ | 588374 | 543154.64 | 165163 | 24682.92 |
| **ಒಟ್ಟು 2023-24** | **2503213** | **2053010.41** | **1894995** | **211851.01** |
| 2024 ಮುಂಗಾರು | 2296901 | 1760167.21 | 940651 | 150617.51 |
| 2024-25 ಹಿಂಗಾರು & ಬೇಸಿಗೆ | 407265 | 444655.80 | 214830 | 54623.70 |
| **ಒಟ್ಟು 2024-25** | **2704166** | **2204823.01** | **1155481** | **205241.21** |
| **ಎಲ್ಲಾ ಹಂಗಾಮುಗಳ ಒಟ್ಟು** | **19410086** | **18379156** | **10290216** | **1306335.00** |